ಯಾವುದೇ ಪಕ್ಷದ ಕಾರ್ಯಕರ್ತರಿಗೂ ಈ ರೀತಿ ಹಿಂಸೆ ಕೊಡುವುದು ದೊಡ್ಡ ಅಪರಾಧವಾಗುತ್ತದೆ. ಸರ್ಕಾರ ಇದನ್ನು ಯಾವುದೇ ರೀತಿಯಲ್ಲೂ ಕ್ಷಮಿಸುವುದಿಲ್ಲ. It is a very serious matter. I will take action and I will see that such incident do not repeat.

(ಅ) ಕೊಯ್ನ ಮತ್ತು ಘಟಪ್ರಭ ಅಚ್ಚುಕಟ್ಟು ಪ್ರದೇಶಗಳಲ್ಲಿ ಹಿನ್ನೀರಿನ ಒತ್ತಡ ಹೆಚ್ಚಾಗುತ್ತಿದ್ದು ಅಲ್ಲಿನ ಗ್ರಾಮಸ್ಥರಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಿಕೊಡುವ ಬಗ್ಗೆ

+ಶ್ರೀ ಪ್ರಹ್ಲಾದ ಹನುಮಂತಪ್ಪ ಪೂಜಾರ್ (ಬಾಗಲಕೋಟಿ) :— ಸನ್ಮಾನ್ಯ ಅಧ್ಯಕ್ಷರೆ, ಕಳೆದ 10-15 ದಿವಸಗಳಿಂದ ಕೊಯ್ನಾ ಮತ್ತು ಘಟಪ್ರಭಾ ಅಚ್ಚುಕಟ್ಟು ಪ್ರದೇಶಗಳಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಆಲಮಟ್ಟಿ ಅಣೆಕಟ್ಟು ತುಂಬಿ ಹರಿಯುತ್ತಿದೆ. ಅಣೆಕಟ್ಟಿನ 509 ಅಡಿಗಳವರೆಗೆ ತುಂಬಿದ ನೀರು ಹೆಚ್ಚಾದಂತೆ ಹೊರಬಿದ್ದು ಮಹಾಪೂರದಂತೆ ಹರಿದು ಹೋಗುತ್ತಿದ್ದು, ಇದರಿಂದ ಸಹಜವಾಗಿಯೇ ಹಿನ್ನೀರಿನ ಒತ್ತಡ ಇವೊತ್ತು ಹೆಚ್ಚಾಗುತ್ತಿದ್ದು, ಇದೇ ಪ್ರಮಾಣದಲ್ಲಿ ನೀರು ಹರಿದು ಬಂದರೆ ಅನೇಕ ಹಳ್ಳಿಗಳು ಮುಳುಗಡೆಯಾಗುತ್ತವೆಂದೂ ಹಾಗೂ ಮುಳುಗಡೆಯಾಗಬಹುದಾದ ಹಳ್ಳಿಗಳನ್ನು ಪಟ್ಟಿ ಮಾಡಿದ್ದು, ಆ ಪಟ್ಟಿಯಲ್ಲಿ ಬಾಗಲಕೋಟೆ ಮಹಾನಗರವಲ್ಲದೆ ಅದರ ಸುತ್ತಮುತ್ತಲಿರುವ ಹಳ್ಳಿಗಳೂ ಸಹ ಇದ್ದು, ಈ ಹಳ್ಳಿಗಳಿಗೆ ಮಹಾಪೂರದ ನೀರು ನುಗ್ಗಿ ಹಾನಿಯುಂಟಾಗುತ್ತದೆಂದು ಪುನರ್ವಸತಿ ಅಧಿಕಾರಿಗಳು ಪತ್ರಿಕೆಗಳ ಮೂಲಕ ಈಗಾಗಲೇ ಪ್ರಕಟಣೆ ಹೊರಡಿಸಿದ್ದಾರೆ. ಇಲ್ಲೊಂದು ಆಶ್ಚರ್ಯ ಅಥವಾ ಕುಚೋದ್ಯವೆಂದು ಹೇಳಬಹುದು. ಪ್ರಕಟಣೆಯ ಪಟ್ಟಿಯಲ್ಲಿದ್ದ ಸುಮಾರು 7-8 ಹಳ್ಳಿಗಳಿಗೆ ಸಂಬಂಧಿಸಿದಂತೆ ಸರ್ಕಾರ ಇದುವರೆವಿಗೂ ಪರಿಹಾರಧನ ನೀಡಿಲ್ಲ ಮತ್ತು ಪುನರ್ವಸತಿ ಕೇಂದ್ರಗಳನ್ನು ಗುರ್ತಿಸಿ ಜನರಿಗೆ ನಿವೇಶನ ಸೌಲಭ್ಯವನ್ನು ಸಹ ಇಲ್ಲಿಯವರೆಗೆ ನೀಡಿಲ್ಲ. ಉದಾಹರಣೆಗೆ ಹೇಳುವುದಾದರೆ, ಬಾಗಲಕೋಟೆ ತಾಲ್ಲೂಕಿನ ಮಲ್ಲಾಪುರ, ಗದಾಂಪುರ, ಮುರ್ನಾಳ್, ಸೋರೆಕೊಪ್ಪ, ಯಡಹಳ್ಳಿ, ಚಬ್ಬಿ ಮುಂತಾದ ಹಳ್ಳಿಗಳಿಗೆ ಸಂಬಂಧಿಸಿದಂತೆ ಪರಿಹಾರ ಧನವನ್ನು ಇನ್ನೂ ನೀಡಿಲ್ಲ, ಅಲ್ಲದೆ, ಪುನರ್ವಸತಿ ಕೇಂದ್ರಗಳನ್ನೂ ಸಹ ಗುರ್ತಿಸಿರುವುದಿಲ್ಲ. ಇದರ ಜೊತೆಗೆ ಆಲಮಟ್ಟಿ ಅಣೆಕಟ್ಟಿನ ಹಿನ್ನೀರಿನಲ್ಲಿ ಬಾಗಲಕೋಟೆ ನಗರದ ಸುಮಾರು 3,567 ಕಟ್ಟಡಗಳು ಮುಳುಗಡೆಯಾಗುವುದೆಂದು ಸರ್ಕಾರ ಗುರ್ತಿಸಿದ್ದರೂ ಮುಳುಗಡೆಯಾಗುವ ಸಾವಿರಾರು ಕಟ್ಟಡಗಳಿಗೆ ಪರಿಹಾರ ಧನ ವಿತರಿಸಿಲ್ಲ, ಮತ್ತು ಅಲ್ಲಿನ ಜನರಿಗೆ ನಿವೇಶನವನ್ನೂ ನೀಡಿಲ್ಲ. ಮುಳುಗಡೆಯಾಗುವ ಪ್ರದೇಶದಲ್ಲಿ ನೂರಾರು ವರ್ಷಗಳಿಂದ ಬಾಡಿಗೆದಾರರಾಗಿ ಬದುಕುತ್ತಿರುವವರಿಗೂ ಸರ್ಕಾರ ಯಾವುದೇ ರೀತಿಯಾದ ಪುನರ್ವಸತಿಯ ನಿವೇಶನ ಸೌಲಭ್ಯ ಒದಗಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಬಾಗಲಕೋಟೆ ಹಾಗೂ ಆ ತಾಲ್ಲೂಕಿನ ಜನರು ರೊಚ್ಚಿಗೆದ್ದು ಅನೇಕ ವರ್ಷಗಳಿಂದ ಸರ್ಕಾರದ ಮುಂದೆ ನಮ್ಮ ಅಹವಾಲುಗಳನ್ನು ಹೇಳುತ್ತಾ ಬೇಡಿಕೆಗಳನ್ನು ಮಂಡಿಸುತ್ತಾ ಬಂದಿದ್ದರೂ ಸರ್ಕಾರ ಸೂಕ್ತ ಕ್ರಮಕ್ಕೆಗೊಳ್ಳದಿರುವುದರಿಂದ ಜನರು ಒಂದು

ತೀರ್ಮಾನಕ್ಕೆ ಬಂದು ನಿನ್ನೆ ದಿವಸ ಬಾಗಲಕೋಟೆ ಬಂದ್ ಆಚರಿಸಿದ್ದಾರೆ. ಬಾಗಲಕೋಟೆ ಬಂದ್ ಸಂದರ್ಭದಲ್ಲಿ ತಾಲ್ಲೂಕಿನ ಎಲ್ಲಾ ಹಳ್ಳಿಗಳಿಂದ ಬಂದ್ ಸುಮಾರು ಹದಿನೈದು ಸಾವಿರದಷ್ಟು ಜನರು ವಿಶೇಷವಾಗಿ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.ಇವತ್ತು ಆ ಬಾಗಲಕೋಟೆಯ ಜನ ಕೃಷ್ಣಾ ಸಂತ್ರಸ್ತರ ಪುನರುತ್ಥಾನ ಸಮಿತಿ ಕರೆಯ ಮೇರೆಗೆ ಬಂದ್ ಏನು ಆಚರಣೆ ಮಾಡಿದ್ದರು ಅವರು ಇನ್ನೂ ಉಗ್ರವಾದಂತಹ ಹೋರಾಟವನ್ನು ಮಾಡಲಿಕ್ಕೆ ತಯಾರಾಗಿದ್ದಾರೆ. ಈಗಾಗಲೇ ಅವರು ನಿತ್ಯ ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದಾರೆ. ನಾನು ಸರ್ಕಾರದಲ್ಲಿ ಕೇಳಿಕೊಳ್ಳುವುದು ಇಷ್ಟೇ. ಬಾಗಲಕೋಟೆ ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆಯ ಕಾರ್ಯ ಏನು ಇದೆ ಅದನ್ನು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಿಂದ ಹೊರತುಪಡಿಸಬೇಕು. ಪುನರ್ ವಿಮರ್ಶೆ ಮಾಡಿ ಸೂಕ್ತ ನೀತಿ ನಿಯಮಗಳನ್ನು ರೂಪಿಸಬೇಕು ಎನ್ನುವಂತಹದು ನನ್ನ ಮನವಿ. ಅದರ ಜೊತೆಗೆ 521ಎಫ್‌ಆರ್‌ಎಲ್‌ವರೆಗೆ ಅದರ ಜೊತೆಗೆ ನಂತರದ 528 ಎಫ್‌ಆರ್‌ಎಲ್‌ವರೆಗೆ, ಈ ಭೇದ ಭಾವಗಳು ನಡೆಯುತ್ತಿವೆ, ಅದು ತಪ್ಪಬೇಕು. ಇಡೀ ಬಾಗಲಕೋಟೆ ನಗರವನ್ನು ಒಂದು ಯೂನಿಟ್ ಎಂದು ಪರಿಗಣಿಸಿ ಏಕಕಾಲಕ್ಕೆ ಸ್ಥಳಾಂತರಗೊಳಿಸಬೇಕು. ಈ ವ್ಯವಸ್ಥೆ ಜರೂರಾಗಿ ಆಗಬೇಕು ಎನ್ನುವುದು ನನ್ನ ಒತ್ತಾಯ. ಇಡೀ ಬಾಗಲಕೋಟೆಯ ಎಲ್ಲ ಜನಗಳಿಗೆ ನಿವೇಶನಗಳನ್ನು ನೀಡಿ ವರ್ತಕರ ಸಂಘಗಳಿಗೂ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಿಕೊಳ್ಳಲು ಅನುಕೂಲ ಮಾಡಿಕೊಡಬೇಕು ಎನ್ನುವಂತಹ ಅನೇಕ ಬೇಡಿಕೆಗಳ ಒಂದು ಪಟ್ಟಿಯನ್ನು ಇಟ್ಟು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದಾರೆ. ಕೇವಲ ನಾಲ್ಕೈದು ದಿವಸಗಳಲ್ಲಿ ಸರ್ಕಾರ ಇದಕ್ಕೆ ಕಿವಿಗೊಟ್ಟು ಸರ್ಕಾರ ಇದರ ಬಗ್ಗೆ ಕಣ್ಣುತೆರೆದು ಈ ಬಾಗಲಕೋಟೆಯ ಜನರ ಅಪೇಕ್ಷೆಯನ್ನು ಈಡೇರಿಸದಿದ್ದರೆ ಇನ್ನೂ ಉಗ್ರವಾದಂತಹ ಹೋರಾಟವನ್ನು ಕೈಗೊಳ್ಳಬೇಕು ಎನ್ನುವ ತೀರ್ಮಾನದಲ್ಲಿ ಅವರು ಇದ್ದಾರೆ. ಅಸಹಕಾರ ಅಂದೋಳನವನ್ನು ಸರ್ಕಾರಿ ವ್ಯವಸ್ಥೆಯ ವಿರುದ್ಧವಾಗಿ, ಅಧಿಕಾರಿಗಳ ವಿರುದ್ಧವಾಗಿ ಕೈಗೆ ಎತ್ತಿಕೊಳ್ಳಲು ಅವರು ಹಿಂದೆ ಮುಂದೆ ನೋಡಲಿಕ್ಕೆ ಇಲ್ಲ ಎನ್ನುವಂತಹ ಸಂದರ್ಭದಲ್ಲಿ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಸರ್ಕಾರ ಇದಕ್ಕೆ ಸೂಕ್ತವಾದಂತಹ ಉತ್ತರವನ್ನು ಕೊಡಬೇಕು. ತಕ್ಷಣ ಇದಕ್ಕೆ ಸ್ಪಂದನೆ ಮಾಡಬೇಕು ಎನ್ನುವಂತಹ ಬೇಡಿಕೆ ಕೂಡ ತಮ್ಮ ಮುಂದೆ ಇಡುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದಂತಹ ಶ್ರೀ ಪಿ.ಎಚ್. ಪೂಜಾರ್ ಅವರು ಬಾಗಲಕೋಟೆ ನಗರದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಬರತಕ್ಕ ಸಂತ್ರಸ್ತರ ಒಂದು ಸಮಸ್ಯೆಗಳ ಬಗ್ಗೆ ಸಮಿತಿಯನ್ನು ಸಹ ಮಾಡಿಕೊಂಡು ಸುಮಾರು 19 ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಮತ್ತು ಇದರ ಬಗ್ಗೆ ತೀವ್ರಗತಿಯಿಂದ ಮುಷ್ಕರವನ್ನೂ ಹೂಡುತ್ತಿದ್ದಾರೆ ಎಂದು ಹೇಳಿದ್ದಾರೆ. ಬಂದ್ ಅನ್ನು ಸಹ ಮಾಡಿದ್ದಾರೆಂದು ತಿಳಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಮನವಿ ಮಾಡುತ್ತೇನೆ. ಆ ಸಂತ್ರಸ್ತರು ಯಾವುದೇ ರೀತಿಯ ಮುಷ್ಕರವನ್ನೇ

ಆಗಲೀ ಅಥವಾ ಬಂದನ್ನೇ ಆಗಲೀ ಆಚರಿಸುವ ದಾರಿಯನ್ನು ಹಿಡಿಯಬಾರದು. ಸರ್ಕಾರ ಈ ಎಲ್ಲಾ ಸಮಸ್ಯೆಗಳ ಬಗ್ಗೆ ಆಲೋಚಿಸಿ ತಕ್ಷಣ ಒಂದು ಸಭೆಯನ್ನು ನಾನು ಕರೆಯುತ್ತೇನೆ. ಬಾಗಲಕೋಟೆಯ ಆಯುಕ್ತರು ಮತ್ತು ಸಂಬಂಧಪಟ್ಟ ಅಧಿಕಾರಿಗಳು, ಶಾಸಕರು ಮತ್ತು ಸಂಬಂಧಪಟ್ಟ ಮುಖಂಡರುಗಳನ್ನು ಸಹ ತಕ್ಷಣದಲ್ಲಿಯೇ ಕರೆಸಿ ಈ ಎಲ್ಲಾ ಬೇಡಿಕೆಗಳ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡಿ ಬಹುಶಃ ಒಂದು ಪರಿಹಾರವನ್ನು ಕಂಡು ಹಿಡಿಯುತ್ತೇನೆ ಎನ್ನುವಂತಹ ಒಂದು ಆಶ್ವಾಸನೆಯನ್ನು ಈ ಸಂದರ್ಭದಲ್ಲಿ ನಾನು ಕೊಡುತ್ತೇನೆ.

ಶ್ರೀ ಪ್ರಹ್ಲಾದ್ ಹನುಮಂತಪ್ಪ ಪೂಜಾರ್ :— ಪರಿಸ್ಥಿತಿ ಕೈ ಮೀರುವಂತಹ ಸಂದರ್ಭ ಅಲ್ಲಿ ಹೆಚ್ಚು ಇರುವ ಕಾರಣಕ್ಕಾಗಿ ಮಾನ್ಯ ಮಂತ್ರಿಗಳು ದಿನಾಂಕವನ್ನು ಗುರುತು ಮಾಡಬೇಕು.

ಅಧ್ಯಕ್ಷರು :— ಕೈ ಮೀರುವುದಿಲ್ಲ, ಮಾನ್ಯ ಸಿಂಧ್ಯಾರವರು ಇದ್ದಾರೆ.

ಶ್ರೀ ಪ್ರಹ್ಲಾದ್ ಹನುಮಂತಪ್ಪ ಪೂಜಾರ್ :— ಯಾವುದಾದರೂ ಒಂದು ದಿನಾಂಕವನ್ನು ಗುರುತು ಮಾಡಿ ಹೇಳಿದರೆ ಒಳ್ಳೆಯದಾಗಬಹುದು. ಪರಿಸ್ಥಿತಿ ಕೈ ಮೀರುವ ಸಂದರ್ಭ ಇದೆ.

ಶ್ರೀ ಬಿ. ಸೋಮಶೇಖರ್ :— ಆದಷ್ಟು ಶೀಘ್ರವಾಗಿ ಒಂದು ವಾರದೊಳಗೆ ಸಭೆ ಕರೆಯುತ್ತೇನೆ.

(ಕ) ಗದಗ್ ನಗರದಲ್ಲಿ ಕಳ್ಳರನ್ನು ಹಿಡಿಯಲು ಹೋಗಿ ಚೂರಿ ಇರಿತಕ್ಕೆ ಒಳಗಾಗಿ ಸತ್ತ ಕುಟುಂಬದವರಿಗೆ ಪರಿಹಾರ.

ಶ್ರೀ ಡಿ.ಆರ್. ಪಾಟೀಲ್ (ಗದಗ್) :— ಮಾನ್ಯ ಅಧ್ಯಕ್ಷರೆ, ಗದಗ್ ನಗರದೊಳಗೆ ಒಂದು ವರ್ಷದ ಹಿಂದೆ ನಡೆದಂತಹ ಒಂದು ಕಳುವಿನ ಪ್ರಸಂಗದೊಳಗೆ ಕಳ್ಳನನ್ನು ಹಿಡಿಯಲು ಹೋಗಿ ಬಸವರಾಜ್ ಹುಮ್ಮತ್ತಿ ಎನ್ನುವ ಒಬ್ಬ ಯುವಕ, ಅವರ ಚೂರಿ ಇರಿತಕ್ಕೆ ಒಳಗಾಗಿ ಸತ್ತ. ಅವನಿಗೆ ಪರಿಹಾರಕೊಡಬೇಕು ಎಂದು ಹೇಳಿ ಆಗಿನ ಗೃಹ ಸಚಿವರನ್ನು ನಾನು ಒತ್ತಾಯಿಸಿದಾಗ ಒಂದು ಲಕ್ಷ ರೂಪಾಯಿ ಪರಿಹಾರ ಕೊಡುವುದಾಗಿ ಈ ಸದನದಲ್ಲಿ ಭರವಸೆ ನೀಡಿದ್ದಾರೆ. ಆ ಭರವಸೆ ನೀಡಿ ಹತ್ತು ತಿಂಗಳ ಮೇಲಾಯಿತು. ಮೊನ್ನೆ ಅವನ ವಾರ್ಷಿಕ ತಿಥಿ ಆಯಿತು. ದಯವಿಟ್ಟು ಆ ಭರವಸೆಯನ್ನು ಕೂಡಲೇ ಈಡೇರಿಸಿ ಆ ಪರಿಹಾರ ಅವರಿಗೆ ದೊರಕುವಂತೆ ತಾವು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, ಪರಿಹಾರ ಇಲ್ಲ. ಆದರೂ ಅವರು ಪರಿಶೀಲನೆ ಮಾಡುತ್ತೇವೆ ಎನ್ನತಕ್ಕ ಭರವಸೆಯನ್ನು ಕೊಟ್ಟಿದ್ದಾರೆ